ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

CC 1368/2024 ಪಿಡಬ್ಲ್ಯೂ-1

ದಿನಾಂಕಃ-29-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರ ಮಾನ್ಯ ಶ್ರೀ. SU ವಕೀಲರಿಂದಃ-**

ನಾನು 10 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಎಳನೀರು ವ್ಯಾಪಾರ ಮಾಡುತ್ತೇನೆ. ಎಪಿಎಂಸಿಯಲ್ಲಿ ಖರೀದಿಸಿ ಬೇರೆ ಕಡೆಯಲ್ಲಿ ಮಾರಾಟ ಮಾಡುತ್ತೇನೆ. ನನಗೆ ಮಾರಾಟ ಮಾಡಲು ಲೈಸನ್ಸ್ ಇರುತ್ತದೆ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ನಾನು ಕಳೆದ 10 ವರ್ಷಗಳಿಂದ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. ನಾನು ಆರೋಪಿಗೆ ಬಿಟ್ಟು ಬೇರೆ ಯಾರಿಗೂ ಸಾಲ ಕೊಟ್ಟಿರುವುದಿಲ್ಲ. ನಾನು ಬೇರೆಯವರಿಗೆ ಸಣ್ಣಪುಟ್ಟ ಸಹಾಯ ಮಾಡುತ್ತಿದ್ದೆ ಅವರು ಕೂಡ ನನಗೆ ಮಾಡುತ್ತಿದ್ದರು ನಾನು ಈ ಹಿಂದೆ ಯಾರ ವಿರುದ್ಧವು ಯಾವುದೇ ಪ್ರಕರಣ ದಾಖಲು ಮಾಡಿಲ್ಲ ಆರೋಪಿ ನನಗೆ 8-10 ವರ್ಷಗಳಿಂದ ಪರಿಚಯ. ಆರೋಪಿ ಭಾವನಿಗೆ ಮೆಡಿಕಲ್ ಶಾಪ್ ಇತ್ತು ಅದು ಅಲ್ಲದೆ ಆರೋಪಿ ಆಗಾಗೆ ನಮ್ಮ ಮಾರುಕಟ್ಟೆ ಬಳಿ ಬರುತ್ತಿದ್ದರು. ಆರೋಪಿಯು ಸಹ ಎಳನೀರನ್ನು ತಂದುಕೊಡುತ್ತಿದ್ದರು ಮತ್ತು ಬೇರೆ ವ್ಯವಹಾರ ಮಾಡುತ್ತಿದ್ದರು ಆಗಾಗಿ ನನಗೆ ಪರಿಚಯ. ಆರೋಪಿಗೆ ಈಗ ಸ್ವಂತ ಮೆಡಿಕಲ್ ಶಾಪ್ ಇದೆ. ಆರೋಪಿ ವ್ಯವಸಾಯ ಸಹ ಮಾಡುತ್ತಾರೆ. ಆರೋಪಿಗೆ ಜಮೀನು ಇರುವ ವಿಚಾರ ನನಗೆ ಗೊತ್ತಿಲ್ಲ. ಆರೋಪಿಯ ಜೊತೆ ಈ ವ್ಯವಹಾರ ಬಿಟ್ಟು ಬೇರೆ ವ್ಯವಹಾರ ಮಾಡಿಲ್ಲ. ದಿ 20.04.2023 ರಲ್ಲಿ ಆರೋಪಿಗೆನಾನು ಹಣ ಕೊಟ್ಟಿರುತ್ತೇನೆ. ಐಸಿಎಸ್ ಸಿ ಬ್ಯಾಂಕ್ ಖಾತೆಯಿಂದ ಆರೋಪಿಯ ಖಾತೆಗೆ 5 ಲಕ್ಷ ಹಣವನ್ನು ಹಾಕಿರುತ್ತೇನೆ ಮತ್ತು ನಗದಾಗಿ 1 ಲಕ್ಷ ಕೊಟ್ಟಿರುತ್ತೇನೆ. ನನಗೆ ಬ್ಯಾಂಕಿನಿಂದ ಸಾಲ ಮಂಜೂರಾಗಿತ್ತು ಅದೇ ಹಣವನ್ನು ಕೊಟ್ಟಿರುತ್ತೇನೆ. ನಾನು ದೂರಿನಲ್ಲಿ ಆ ಬಗ್ಗೆ ತಿಳಿಸಿರುತ್ತೇನೆ.

ಐಸಿಎಸ್ ಸಿ ಬ್ಯಾಂಕ್ ನಿಂದ ನನಗೆ 75 ಲಕ್ಷ ಹಣ ಸಾಲ ಮಂಜೂರಾಗಿತ್ತು. ಸದರಿ ವಿಚಾರ ಆರೋಪಿಗೂ ಗೊತ್ತಿದ್ದ ಕಾರಣ ಅವರು ನನ್ನ ಬಳಿ ಸಾಲ ಕೇಳಿರುತ್ತಾರೆ. ವ್ಯಾಪಾರಕ್ಕೋಸ್ಕರ ನಾನು ಸದರಿ ಸಾಲ ಪಡೆದಿರುತ್ತೇನೆ. ನಾನು ಸಾಲಗಾರನಾಗಿರುವುದರಿಂದ ಬೇರೆಯವರಿಗೆ ಸಾಲ ಕೊಡಲು ಬರುವುದಿಲ್ಲ ಎಂದರೆ ಸದರಿ ಸಾಲವನ್ನು ವ್ಯಾಪಾರಕ್ಕೋಸ್ಕರ ಪಡೆದಿರುತ್ತೇನೆ ಮತ್ತು ಆರೋಪಿಗೆ ಮಾನವತೆಯ ದೃಷ್ಟಿಯಿಂದ ಕೊಟ್ಟಿರುತ್ತೇನೆ. ಆರೋಪಿಗೆ ನೀಡಿದ ಸಾಲದ ಹಣಕ್ಕೆ ನಾನು ಬಡ್ಡಿ ಮಾತನಾಡಿರುವುದಿಲ್ಲ. ಆರೋಪಿಯ ಜೊತೆ 8 ವರ್ಷ ಒಡನಾಟ ಇಟ್ಟು ಅವರು ಆರ್ಥಿಕ ಸಮಸ್ಯೆಯಿಂದ ಬಳಲುತ್ತಿದ್ದರು ಸದರಿ ವಿಚಾರ ನನಗೆ ಗೊತ್ತಿದ್ದ ಕಾರಣ ಹಣ ಕೊಟ್ಟಿರುತ್ತೇನೆ. ಆ ಬಗ್ಗೆ ನಾನು ದೂರಿನಲ್ಲಿ ತಿಳಿಸಿರುವುದಿಲ್ಲ. ಆರೋಪಿ 8 ದಿನದಲ್ಲಿ ಹಣವನ್ನು ವಾಪಸ್ ಕೊಡುವುದಾಗಿ ತಿಳಿಸಿದ್ದರು ಆ ಬಗ್ಗೆ ನಮ್ಮ ವಕೀಲರಿಗೆ ತಿಳಿಸಿದ್ದು ದೂರಿನಲ್ಲಿ ಬರೆಸಿರುತ್ತೇನೆ. ಆರೋಪಿಯ ಬಳಿ ಹಣವನ್ನು ಕೇಳಿದಾಗ 05.05.2023 ರಲ್ಲಿ ಆರೋಪಿ ನನಗೆ ಚೆಕ್ಕನ್ನು ಕೊಟ್ಟಿರುತ್ತಾರೆ. ಅದನ್ನು ನಾನು ಬ್ಯಾಂಕಿನ ದಾಖಲಿಸಿದಾಗ ಆರೋಪಿಯ ಖಾತೆಯಲ್ಲಿ ಹಣವಿಲ್ಲ ಎಂದು ಬಂತು. ಆ ಬಗ್ಗೆ ನಾನು ದೂರಿನಲ್ಲಿ ತಿಳಿಸಿರುತ್ತೇನೆ.

ಆರೋಪಿಯು ಬರವಣಿಗೆ ಮಾಡಿದ ಚೆಕ್ಕನ್ನು ನನ್ನ ಎದುರಿನಲ್ಲಿ ಸಹಿ ಮಾಡಿ ಕೊಟ್ಟಿರುತ್ತಾರೆ. 05.04.2024 ರಲ್ಲಿಯೇ ನಾನು ನಿಪಿ 1 ರ ಚೆಕ್ಕನ್ನು ಬ್ಯಾಂಕಿಗೆ ದಾಖಲಿಸಿರುತ್ತೇನೆ. ಆ ಬಗ್ಗೆ ನಾನು ದೂರಿನಲ್ಲಿ ಬರೆಸಿರುತ್ತೇನೆ. 500 ಮುಖ ಬೆಲೆಯ 2 ಕಟ್ಟು ಹಣವನ್ನು ಆರೋಪಿಗೆ ನೀಡಿರುತ್ತೇನೆ. 19.04.2023 ರಲ್ಲಿ ಶಿವಲಿಂಗೇಗೌಡರ ಮಗ ಸಿ.ಎಸ್ ಸಿದ್ದಾರ್ಥ ಎಂದರೆ ನಾನೇ ಆಗಿರುತ್ತೇನೆ. ಎಚ್ ಆರ್ ನಂದೀಶ ಎಂದರೆ ಆರೋಪಿ ಆಗಿರುತ್ತಾರೆ. ಕ್ರಯದ ಖರಾರಿನಲ್ಲಿರುವ ದಾಖಲೆ ನನ್ನದಲ್ಲ. ಸದರಿ ದಾಖಲೆಯಲ್ಲಿರುವ ಆರೋಪಿಯ ಸಹಿ ಆರೋಪಿಯದ್ದೇ ಆಗಿರುತ್ತದೆ. ವಕೀಲರಾದ ಮಧು ಅವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ. ಜಿ ಡಿ ರವಿ ಯಾರು ಎಂದು ನನಗೆ ಗೊತ್ತಿಲ್ಲ. ರವಿ ಎಂಬುವರು ಗೊತ್ತಿರುತ್ತಾರೆ. ಅವರ ಸಹ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ರವಿ ಎಂಬುವರು ಮಾತ್ರ ಗೊತ್ತಿರುತ್ತಾರೆ ಅವರ ತಂದರೆ ಹೆಸರು ನನಗೆ ಗೊತ್ತಿಲ್ಲ ಕ್ರಯದ ಖರಾರಿನಲ್ಲಿ ಅವರು ಸಹ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಬಳಿ ಸರ್ವೆ ನಂ.10/1 ರ 30 ಗುಂಟೆ ಆಸ್ತಿಗೆ ಸಂಬಂಧಪಟ್ಟಂತೆ ನನಗೆ ಕ್ರಯದ ಖರಾರು ಆಗಿತ್ತು ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ಕ್ರಯ ಕಾರರು ಆಗುವಾಗ ರೂ.7 ಲಕ್ಷ ಸಾಲ ಪಡೆದಿದ್ದರು ಎಂದರೆ ಸರಿಯಲ್ಲ. ಅದು 19.04.2023 ರಲ್ಲಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಸಾಲ ಪಡೆದ ಸಂದರ್ಭ ದಲ್ಲಿ 7 ಲಕ್ಷ ಸಾಲಕ್ಕೆ ಬರಲಾಗಿ ನಾಲ್ಕು ಖಾಲಿ ಚೆಕ್ ಗಳು ಮತ್ತು ಒಂದು ಕ್ರಯದ ಕರಾರು ಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಂತರದಲ್ಲಿ ಆರೋಪಿಯು ಹಣವನ್ನು ವಾಪಸ್ ಮಾಡಿರುತ್ತಾರೆ ಆಗ ನಾನು 2 ಚೆಕ್ ಗಳನ್ನು ಪಡೆದು ಈ ಪ್ರಕರಣವನ್ನು ಮತ್ತು ರವಿ ಎಂಬುವರಿಂದ ಮತ್ತೊಂದು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ0. ಮತ್ತೆರಡು ಚೆಕ್ ಗಳನ್ನು ನಾವೇ ಇಟ್ಟುಕೊಂಡಿರುತ್ತೇವೆ ಎಂದರೆ ಸರಿಯಲ್ಲ ಅದು ಅಲ್ಲದೆ ಮೇಲ್ಕಂಡ ಆಸ್ತಿಗೆ ಸಂಬಂಧಪಟ್ಟಂತೆ ನೊಂದಾಯಿತ ವಲ್ಲದ ಕ್ರಯದ ಪತ್ರವನ್ನು ದಾಖಲಿಸಿ ಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಚೆಕ್ ಗಳನ್ನು ವಾಪಸ್ ಕೇಳಿದಾಗ ಇಲ್ಲದ ಸಬೂಬು ಹೇಳಿ ಚೆಕ್ ಗಳನ್ನು ವಾಪಸ್ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ನಡುವೆ ಯಾವುದೇ ವ್ಯವಹಾರ ಆಗಿಲ್ಲ. ನನ್ನಿಂದ ಆರೋಪಿಯು 6 ಲಕ್ಷ ಹಣವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆರೋಪಿಗೆ ನಾನು ವಕೀಲರ ಮೂಲಕ ನೋಟಿಸನ್ನು ಕೊಟ್ಟಿರುತ್ತೇನೆ. ನಾವು ನೀಡಿದ ನೋಟಿಸ್ ಅವರಿಗೆ ಜಾರಿಯಾಗಿರಲಿಲ್ಲ. ಆರೋಪಿಯು ನೋಟಿಸನ್ನು ಪಡೆಯದ ಕಾರಣ ಜಾರಿಯಾಗಿರುವುದಿಲ್ಲ. ಆರೋಪಿಗೆ ಹಲವಾರು ವ್ಯವಹಾರ ಇರುವುದರಿಂದ ತುಂಬಾ ಒರಗಡೆ ಒಡಾಡುತ್ತಾರೆ ಎಂದರೆ ಸರಿ. ಆದ ಕಾರಣದಿಂದ ಸದರಿ ನೋಟಿಸು ಆರೋಪಿಗೆ ತಲುಪಿಲ್ಲ ಎಂದರೆ ಸರಿ. ಸದರಿ ನೋಟಿಸು ಆರೋಪಿಗೆ ತಲುಪಿದ್ದರೆ ಅವರು ಸರಿಯಾದ ಉತ್ತರ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಚೆಕ್ ನಲ್ಲಿರುವ ಸಹಿ ಆರೋಪಿಗೆ ಸೇರಿದ್ದು. ನಿಪಿ 1 ರ ಬರಹವನ್ನು ಆರೋಪಿ ಬರೆದು ತಂದಿದ್ದರು. ಆ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ನಿಪಿ 1 ರ ಸಹಿ ಬಿಟ್ಟ ಅದರಲ್ಲಿರುವ ಬರಹಗಳನ್ನು ಆರೋಪಿ ಮಾಡಿಲ್ಲ ಎಂದರೌ ಸರಿಯಲ್ಲ. ಆರೋಪಿಯಿಂದ 7 ಲಕ್ಷ ಹಣವನ್ನು ವಾಪಸ್ ಪಡೆದಿದ್ದರು ಸಹ ನಿಪಿ1 ಅನ್ನು ಸೃಷ್ಟಿ ಮಾಡಿಕೊಂಡು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ಹೆಚ್ಚಿನ ಹಣ ವಸೂಲಿ ಮಾಡುವ ಉದ್ದೇಶದಿಂದ ನಾನು ಮತ್ತು ರವಿ 2 ಚೆಕ್ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಕ್ರಯದ ಕರಾರು ಪತ್ರವನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ನನಗೆ ಯಾವುದೇ ತಕರಾರು ಇಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣ ಕಾಸಿನ ವ್ಯವಹಾರ ಇಲ್ಲದೇ ಇದ್ದರೂ ಸಹ ನಿಪಿ1 ಅನ್ನು ಉಪಯೋಗಿಸಿ ಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ರವಿ ಒಂದೇ ದಿನ ಚೆಕ್ ಪ್ರಕರಣಗಳನ್ನು ದಾಖಲು ಮಾಡಿರುತ್ತೇವೆ ನನ್ನ ಪ್ರಕರಣ ಸಿಸಿ 1368/2024 ಮತ್ತು ರವಿಯು ಸಲ್ಲಿಸಿರುವ ಚೆಕ್ ಪ್ರಕರಣ ಸಿಸಿ 1369/2024 ಎಂದರೆ ನನಗೆ ಗೊತ್ತಿಲ್ಲ. ಸದರಿ ರವಿಯವರು 3 ಲಕ್ಷಕ್ಕೆ ಚೆಕ್ ಪ್ರಕರಣ ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಒಂದನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,

ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ